**ಸಿ.ಸಿ ನಂ. 263/2018**

ಪಿ ಡಬ್ಲ್ಯೂ-1

**ದಿನಾಂಕ 26.09.2024 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ:-**

ನಾನು ಡಿಗ್ರಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಹೇಳಿಕೆ ದಾಖಲಿಸುವ ಸಮಯದಲ್ಲಿ ವೈದ್ಯಾಧಿಕಾರಿಗಳು ಇರಲಿಲ್ಲ. ನನ್ನ ಹೇಳಿಕೆಯಲ್ಲಿರುವ ಎಲ್ಲಾ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ. ಆರೋಪಿ 5 ಮತ್ತು ನಾನು ದಾಯಾದಿಗಳು ಎಂದರೆ ಸರಿ. ಮರ ಕಡೆದ ಜಮಿನಿಗೆ ಸಂಬಂಧಿಸಿದಂತೆ ಸಿವಿಲ್ ದಾವೆ ನಡೆದಿತ್ತು ಎಂದರೆ ಸರಿ. ನನ್ನ ಹೇಳಿಕೆಯಲ್ಲಿ ಬಾಳೆ ಗಿಡ ನೆಡೆತಿದ್ದು ತಿಂಡಿ ಮಾಡಲು ಮನೆಗೆ ಹೋಗುತ್ತಿದ್ದೆವು ಎಂದು ಹೇಳಿರುತ್ತೇನೆ ಮತ್ತು ನನ್ನ ಹೇಳಿಕೆಯಲ್ಲಿ ಬಾಳೆ ಕಂದು ನೋಡಬೇಕೆಂದು ಹೋಗುತ್ತಿದ್ದೆ ಎಂದು ಹೇಳಿರುವುದಿಲ್ಲ. ನನ್ನ ಹೇಳಿಕೆಯಲ್ಲಿರುವ ವಿಚಾರಗಳನ್ನು ಪೂಲೀಸಿನವರ ಮುಂದೆ ಹೇಳಿರುತ್ತೇನೆ. ಸದರಿ ವಿಚಾರಗಳನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಮೊದಲ ಬಾರಿಗೆ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಘಟನೆ ನಡೆದ ಸ್ಥಳದಿಂದ ಊರಿಗೆ 100 ಮೀಟರ್ ಅಂತರವಿರುತ್ತದೆ. ಘಟನೆ ನಡೆದಿದೆ ಎಂದು ಹೇಳಲಾದ ಜಮೀನು ಖಾಲಿ ಇತ್ತು. ಸದರಿ ಜಮೀನಿಗೆ ಆರೋಪಿತರು ಎಷ್ಟು ಜನ ಹೋಗಿದ್ದರು ಎಂದು ನಾನು ನೋಡಿರುವುದಿಲ್ಲ. 5 ನೇ ಆರೋಪಿ ಬೈಕಿನಿಂದ ಮಚ್ಚು ಮತ್ತು ದೊಣ್ಣೆ ತಂದಿರುತ್ತಾರೆ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನನ್ನ ಬಟ್ಟೆಗೆ ರಕ್ತದ ಕಲೆಯಾಗಿತ್ತು. ಮುದ್ದೆ ಮಾಲು 1 ರಿಂದ 3 ಆರೋಪಿ 1 ಮತ್ತು 5 ರವರ ಬಳಿ ಇತ್ತು ಅದು ನಿಖರವಾಗಿ ಇದೇ ಎಂದು ಹೇಳಲಾಗುವುದಿಲ್ಲ. ರಕ್ತದ ಕಲೆಯಾಗಿದ್ದ ಬಟ್ಟೆಯನ್ನು ಪೋಲಿಸಿನವರಿಗೆ ನೀಡಿರುತ್ತೇನೆ. ಗಲಾಟೆ ನಡೆದ ಸಮಯದಲ್ಲಿ ಸುಮಾರು 6 ರಿಂದ 7 ಜನ ಇದ್ದರು. ಸದರಿ ಸಮಯದಲ್ಲಿ ನನ್ನ ಮತ್ತು ಆರೋಪಿತರ ನಡುವೆ ಮಾತು ಕತೆ ನಡೆದಿರುತ್ತದೆ. ಸರ್ವೆ ನಂಬರ್ 23 ರ ಪಹಣಿ ಆರೋಪಿ 5 ರವರ ಹೆಸರಿನಲ್ಲಿ ಇರುತ್ತದೆ.

ನಮ್ಮನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ ಗಲಾಟೆ ಮುಗಿದ ನಂತರ ಬಂದಿರುತ್ತಾರೆ. ಚಾಸಾ 3 ರವರ ಬಟ್ಟೆ ರಕ್ತದ ಕಲೆಯಾಗಿರುವುದಿಲ್ಲ ಚಾಸಾ 2 ರವರಿಗೆ ಬಟ್ಟೆಗೆ ಸ್ವಲ್ಪ

ರಕ್ತದ ಕಲೆ ಆಗಿತ್ತು. ನಾನು ಆಸ್ಪತ್ರೆ ಯಲ್ಲಿ ಒಳರೋಗಿಯಾಗಿ 2-3 ದಿನ ಚಿಕಿತ್ಸೆ ಪಡೆದು ನಂತರ ಮೈಸೂರು ಆಸ್ಪತ್ರೆಗೆ ಹೋಗಿ ಒಂದು ದಿನ ಇದ್ದು ಪುನಃ ಹೆಚ್.ಡಿ. ಕೋಟೆ ಆಸ್ಪತ್ರೆ ಗೆ ಬಂದು 3 ದಿನ ಚಿಕಿತ್ಸೆ ಪಡೆದಿರುತ್ತೇನೆ. ಆರೋಪಿತರು ನನ್ನ ವಿರುದ್ಧ ದೂರು ದಾಖಲಿಸಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ್ 23 ಕ್ಕೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಮ್ಮ ಮಧ್ಯ ಸಿವಿಲ್ ದಾವೆ ಇರುವುದರಿಂದ, ಆರೋಪಿ ಗಳು ಒಡೆದು ಗಲಾಟೆ ಮಾಡದಿದ್ದರು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲು 1 ರಿಂದ 3 ಕ್ಕೂ ಆರೋಪಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾ. ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.

**ದಿನಾಂಕ 26.09.2024 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಪಾಟೀಸವಾಲುಆರೋಪಿತರಪರವಕೀಲರಿಂದ:-**

ನನ್ನ ಹೇಳಿಕೆಯನ್ನು ಆಸ್ಪತ್ರೆಯಲ್ಲಿ ದಾಖಲಿಸಿಕೊಂಡಿರುತ್ತಾರೆ ಆ ಸಮಯದಲ್ಲಿ ವೈದ್ಯರು ಇರಲಿಲ್ಲ. ಮೊದಲು ಚಾಸಾ 1 ರವರ ನಾನು ಹೋಗಿರಲಿಲ್ಲ. ಆರೋಪಿತರು ಚಾಸಾ 1 ರವರಿಗೆ ಹೊಡೆದಿರುವುದನ್ನು ನಾನು ನೋಡಿರುವುದಿಲ್ಲ ಎಂದರೆ ನಾನು 50 ಮೀಟರ್ ದೂರದಿಂದ ಹೋಗುತ್ತಿದ್ದಾಗ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಮುದ್ದೆ ಮಾಲು 1 ಮತ್ತು 2 ರಲ್ಲಿ ಯಾವ ಮಚ್ಚಿನಿಂದ ಚಾಸಾ 1 ರವರಿಗೆ ಹೊಡೆದಿರುತ್ತಾರೆ ಎಂದು ನಾನು ನೋಡಿರುವುದಿಲ್ಲ ಆದರೆ ಮುದ್ದೆ ಮಾಲು 1 ಮತ್ತು 2 ರಿಂದ ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ನನಗೂ ಮತ್ತು ಚಾಸಾ 1 ರವರ ಬಟ್ಟೆಗೂ ರಕ್ತದ ಕಲೆಯಾಗಿತ್ತು. ಸದರಿ ಬಟ್ಟೆಗಳನ್ನು ಪೋಲಿಸಿನವರು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಚಾಸಾ 6 ರವರು ಜಗಳ ಬಿಡಿಸಿರುತ್ತಾರೆ. ಆಗ ಸಮಯ ಎಷ್ಟು ಆಗಿತ್ತು ಎಂದು ಗೊತ್ತಿಲ್ಲ. ಆರೋಪಿ 5 ಮತ್ತು ಚಾಸಾ 1 ರವರು ಅಣ್ಣ ತಮ್ಮಂದಿರು ಎಂದರೆ ಸರಿ. ಆರೋಪಿತರಿಗೂ ನಮಗು ಸದರಿ ಜಮೀನಿಗೆ ಸಂಬಂಧಿಸಿದಂತೆ ಸಿವಿಲ್ ದಾವೆ ನಡೆದಿರುತ್ತದೆ ಎಂದರೆ ಸರಿ. ಆರೋಪಿತರು ಸಹ ನಮ್ಮ ವಿರುದ್ಧ ದೂರು ನೀಡಿರುತ್ತಾರೆ ಎಂದರೆ ಸರಿ.

ಹೆಚ್.ಡಿ. ಕೋಟೆ ಆಸ್ಪತ್ರೆ ಯಲ್ಲಿ 3 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದು ನಂತರ ಮೈಸೂರಿನ ಕೆ ಆರ್ ಆಸ್ಪತ್ರೆ ಗೆ ಹೋಗಿ 2 ದಿನ ಚಿಕಿತ್ಸೆ ಪಡೆದು ನಂತರ ಹೆಚ್.ಡಿ. ಕೋಟೆ ಆಸ್ಪತ್ರೆ ಯಲ್ಲಿ 1 ವಾರ ಚಿಕಿತ್ಸೆ ಪಡೆದುಕೊಂಡು ನಂತರ ಜೆ ಎಸ್ ಎಸ್ ಆಸ್ಪತ್ರೆ ಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಜೆ ಎಸ್ ಎಸ್ ಆಸ್ಪತ್ರೆ ಯಲ್ಲಿ ಚಿಕಿತ್ಸೆ ಪಡೆದ ದಾಖಲೆಗಳನ್ನು ಪೋಲೀಸಿನವರಿಗೆ ಕೊಟ್ಟಿರುವುದಿಲ್ಲ.

ನಮಗೂ ಆರೋಪಿತರಿಗೂ ಸಿವಿಲ್ ವ್ಯಾಜ್ಯ ಇರುವುದರಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿಗಳು ಯಾವುದೇ ಗಲಾಟೆ ಮಾಡಿಲ್ಲ ಮತ್ತು ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು 1 ರಿಂದ 3 ಕ್ಕೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾ. ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.